For more job news visit : www.kpscvaani.com

# ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕ ನಿಯಮಿತ ಸಿಂದಗಿ-೫೮೬೧೨೮

## ಜಿ॥ವಿಜಯಪೂರ

## "ಅಧಿಸೂಚನೆ"

ವೆಬ್‌ಸೈಟ್ ವಿಳಾಸ: www.sindgiurbanbank.com

ಅಧಿಸೂಚನೆ ಸಂಖ್ಯೆ15/ಸಿಬ್ಬಂದಿ ನೇಮಕಾತಿ/2025-26 ದಿನಾಂಕ: 25.11.2025

ಅಧಿಸೂಚನೆ ಸಂಖ್ಯೆ14/ಸಿಬ್ಬಂದಿ ನೇಮಕಾತಿ/2025-26 ದಿನಾಂಕ: 28.10.2025 **ರಂದು ನೇಮಕಾತಿ ಅಧಿಸೂಚನೆ ಪ್ರಕಟಿಸಲಾಗಿತ್ತು. ಅನಿವಾರ್ಯ ಕಾರಣಗಳಿಂದ ಅರ್ಜಿ ಸಲ್ಲಿಸುವ ಕೋನೆಯ ದಿನಾಂಕವನ್ನು 26.11.2025 ರಿಂದ 20.12.2025 ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ಅರ್ಜಿ ಸಲ್ಲಿಸಿದವರು ,ಮತ್ತ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವದಿಲ್ಲ.**

ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಆದೇಶ ಸಂಖ್ಯೆ ಯುಬಿಸಿ-7/ ಯುಸಿಎಸ್/130/2022-23 ದಿನಾಂಕ:26.12.2022 ರಡಿಯಲ್ಲಿ ಹೊರಡಿಸಿದ ಆದೇಶದ ಮೇರೆಗೆ ದಿ ಸಿಂದಗಿ ಪಟ್ಟಣ ಸಹಕಾರಿ ಬ್ಯಾಂಕ ನಿ, ಸಿಂದಗಿ ಇದರಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಇಚ್ಚೆಯುಳ್ಳ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ 20.12.2025 ರ ವರೆಗೆ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ದಿ.20.12.2025 ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸಲು ಅವಕಾಶವಿರುತ್ತದೆ.

ಆನ್‌ಲೈನ್ ಮುಖಾಂತರ ಅರ್ಜಿಗಳನ್ನು https://sindagiurbanbank.buffersoft.com/ ಇದರಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**ನೇಮಕಾತಿ ಮಾಡಿಕೊಳ್ಳುತ್ತಿರುವ ಹುದ್ದೆಗಳ ವಿವರ.**

| ಅನಂ | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಕಿರಿಯ ಸಹಾಯಕರು | 27650-650-29600-750-32600-850-36000-950-39800-1100-46400-1250-52650 | 06 |
| 2 | ಜವಾನ | 19950-450-20400-500-22400-550-24600-600-27000-650-29600-750-32600-850-36000-950-37900 | 04 |
| | ಒಟ್ಟು | | 10 |

ಮತ್ತು ನಿಯಮಾನುಸಾರ ತುಟ್ಟಿ ಭತ್ಯ ಹಾಗು ಇತರ ಭತ್ಯಗಳು.

**ವಿದ್ಯಾರ್ಹತೆ:**

೧) **ಕಿರಿಯ ಸಹಾಯಕರು 06**

ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಪಡೆದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಷ್ಟರಗಳ ಸರಾಸರಿ ಕನಿಷ್ಟ 60 % ರಷ್ಟು ಅಂಕ ಪಡೆದಿರಬೇಕು. ಸಹಕಾರ ವಿಷಯದಲ್ಲಿ ಪದವಿ/ಡಿಪ್ಲೋಮಾ ಮುಗಿಸಿದವರಿಗೆ, ಕಂಪ್ಯೂಟರ ಪರಿಜ್ಞಾನ ಹೊಂದಿದವರಿಗೆ ಹಾಗೂ ಕನಿಷ್ಟ ಮೂರು ವರ್ಷ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದವರಿಗೆ ಆಧ್ಯತೆ ನೀಡಲಾಗುವದು.

೨) **ಜವಾನ 04**

ಎಸ್,ಎಸ್,ಎಲ್,ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಕನಿಷ್ಟ 45 % ರಷ್ಟು ಅಂಕ ಪಡೆದು ಪಾಸಾಗಿರಬೇಕು.

**ವಯೋಮಿತಿ:**

For more job news visit : www.kpscvaani.com

ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು. ಗರಿಷ್ಠ ವಯೋಮಿತಿ ಈ ಕೆಳಗಿನಂತೆ ಇದೆ.

೧) ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷಗಳಿಗೆ ಮೀರಿರಬಾರದು.

೨) ಹಿಂದುಳಿದ ವರ್ಗದ ಅಭ್ಯಥಿಗಳಿಗೆ 38 ವರ್ಷಗಳಿಗೆ ಮೀರಿರಬಾರದು.

೩) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ಅಭ್ಯರ್ಥಿಗಳಿಗೆ 40 ವರ್ಷಗಳು ಮೀರಿರಬಾರದು.

**ಅರ್ಜಿ ಶುಲ್ಕ:**

೧) ಕಿರಿಯ ಸಹಾಯಕರು ಹುದ್ದೆಗಳಿಗೆ ರೂ. 1000 /- (GST ಸೇರಿಸಿ) ( ಒಂದು ಸಾವಿರ ರೂಪಾಯಿಗಳು ಮಾತ್ರ)

೨) ಜವಾನ ಹುದ್ದೆಗಳಿಗೆ ರೂ. 500 /- (GST ಸೇರಿಸಿ) ( ಐದನೂರು ರೂಪಾಯಿಗಳು ಮಾತ್ರ )
(ತುಂಬಿದ ಅರ್ಜಿ ಶುಲ್ಕ ವಾಪಸು ಕೊಡಲಾಗುವುದಿಲ್ಲ.)

**ಅರ್ಜಿ ಸಲ್ಲಿಸುವ ವಿಧಾನ:**

೧. ಬ್ಯಾಂಕಿನ ವೆಬ್ ಸೈಟ್ ಮೂಲಕ ಪ್ರಚುರಪಡಿಸಿದ ಲಿಂಕನಲ್ಲಿ ಮಾತ್ರ ONLINE ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

೨. ಅರ್ಜಿಗಳನ್ನು ಸಲ್ಲಿಸುವಾಗ ಅಯಾ ಹುದ್ದೆಗಳ ಅರ್ಜಿಗಳನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.

೩. ಆರ್ಜಿಗಳನ್ನು ONLINE ನಲ್ಲಿ ದಿ. 20.12.2025 ರವರೆಗೆ ಸಾಯಂಕಾಲ 05.00 ಘಂಟೆವರೆಗೆ ಅವಕಾಶವಿರುವುದು.

೪. ಅರ್ಜಿಯಲ್ಲಿಯ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು.

೫. ಅಭ್ಯರ್ಥಿಗೆ ಕನ್ನಡ ಭಾಷಾ ಪರಿಜ್ಞಾನ ಕಡ್ಡಾಯವಾಗಿರುತ್ತದೆ.

**ಆಯ್ಕೆ ವಿಧಾನ** ಮೇಲಿನ ಕಿರಿಯ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳಿಗೆ ಹುದ್ದೆಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಲಿಖಿತ ಪರೀಕ್ಷೆಗೆ ಕರೆಯಲಾಗುವುದು.

ಅಧಿಕೃತ ಬಾಹ್ಯ ಸಂಸ್ಥೆಗಳಿಂದ ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡ 85 ಕ್ಕೆ ಇಳಿಸಿ 1 : 5 ರ ಅನುಪಾತದಲ್ಲಿ ಮೌಕಿಕ ಸಂದರ್ಶನಕ್ಕೆ ಕರೆಯಲಾಗುವುದು.

ಲಿಖಿತ ಪರೀಕ್ಷೆಯನ್ನು ಈ ಕೆಳಕಂಡ ವಿಷಯದ ಮೇಲೆ ನಡೆಸಲಾಗುವುದು.

| ಅ ನಂ | ವಿಷಯ | ಅಂಕಗಳು | ಅ ನಂ | ವಿಷಯ | ಅಂಕಗಳು |
|---|---|---|---|---|---|
| 1 | ಕನ್ನಡ ಬಾಷೆ | 50 | 2 | ಇಂಗ್ಲೀಷ ಬಾಷೆ | 25 |
| 3 | ಸಾಮಾನ್ಯ ಜ್ಞಾನ | 25 | 4 | ಸಹಕಾರ ಮತ್ತು ಬ್ಯಾಂಕಿಂಗ್ | 50 |
| 5 | ಭಾರತದ ಸಂವಿಧಾನ | 25 | 6 | ಸಮಾಜದ ಯುಕ್ತವಾದ ಚಟುವಟಿಕೆ ಮತ್ತು ವಸ್ತುನಿಷ್ಠ ವಿಷಯ | 25 |
| | | | | ಒಟ್ಟು | 200 |

ಕಿರಿಯ ಸಹಾಯಕರ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕ, ಸ್ಥಳ ಮತ್ತು ಸಮಯ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

ಜವಾನ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆದಾರದ ಮೇಲೆ ಮೌಕಿಕ ಸಂದರ್ಶನಕ್ಕೆ ಕರೆಯಲಾಗುವುದು.

**ಅಭ್ಯರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ONLINE ನಲ್ಲಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು,**

i) ಪಾಸ್‌ಪೋರ್ಟ ಅಳತೆಯ ಭಾವಚಿತ್ರ

For more job news visit : www.kpscvaani.com

ii) ವಯಸ್ಸು ಧೃಡೀಕರಣ ಕುರಿತು. ಎಸ್,ಎಸ್,ಎಲ್,ಸಿ ಅಂಕಪಟ್ಟಿ /ವರ್ಗಾವಣೆ ಪ್ರಮಾಣ ಪತ್ರ

iii) ವಿದ್ಯಾರ್ಹತೆ ಕುರಿತು ಪ್ರಮಾಣ ಪತ್ರ, ಎಸ್,ಎಸ್,ಎಲ್,ಸಿ ಮತ್ತು ಪದವಿಯ ಅಂಕಪಟ್ಟಿ

iv) ವಯೋಮಿತಿ ಸೌಲಬ್ಯಕ್ಕಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–೧, ಹಿಂದುಳಿದ ವರ್ಗದ ಅಭ್ಯರ್ಥಿಗಳು ಸರಕಾರ ನಿಗದಿ ಪಡಿಸಿದ ನಮೊನೆಯಲ್ಲಿ ಸಂಬಂದಿಸಿದವರಿಂದ ಪಡೆದ ಮೂಲ ಪ್ರಮಾಣ ಪತ್ರ

(ಮೂಲ ಪ್ರಮಾಣ ಪತ್ರ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಬ್ಯಾಂಕು ಕೇಳಿದಾಗ ಮೂಲ ಪ್ರಮಾಣ ಪತ್ರವನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು)

ಇತರೆ ನಿಯಮಗಳು:

೧) ಪೂರ್ಣ ವಿವರಗಳನ್ನು ಹೊಂದದೆ ಇರುವ ಹಾಗೂ ಅವಶ್ಯಕ ದಾಖಲಾತಿಗಳನ್ನು ಅಪ್ ಲೋಡ್ ಮಾಡದೇ ಇರುವ ಹಾಗೂ ಅವಧಿ ಮೀರಿ ಅಪ್‌ಲೋಡ್ ಮಾಡಿದ ಮತ್ತು ಟಪಾಲು ಮೂಲಕ ಬ್ಯಾಂಕಿಗೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವದು.

೨) ಅಭ್ಯಥಿಗಳ ಆಯ್ಕೆ, ಅರ್ಜಿ ಸ್ವೀಕರಿಸುವ ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

೩) ನೇಮಕಾತಿಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ, ರದ್ದು ಪಡಿಸುವ, ನಿಭಂದನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದರಿಸಿಕೊಂಡಿದೆ.

೪) ಆಯ್ಕೆಗೊಂಡ ಅಭ್ಯರ್ಥಿಗಳು 2 ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವುದು ಹಾಗೂ ಬ್ಯಾಂಕಿನಿಂದ ಸೂಚಿಸಿದಂತೆ ಭದ್ರತೆ ನೀಡಬೇಕು.

೫) ನೇಮಕಾತಿಗೆ ಸಂಬಂದಿಸಿದಂತೆ ಬ್ಯಾಂಕಿನೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ಮಾಡಲು ಆಸ್ಪದ ಇರುವುದಿಲ್ಲ

೬) ಕನ್ನಡ ಓದಲು ಬರೆಯಲು ಕಡ್ಡಾಯವಾಗಿ ಬರಬೇಕು.

೭) ಮೌಕಿಕ/ಲಿಖಿತ ಪರೀಕ್ಷೆಗಳಿಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

೮) ಯಾವುದೇ ಅಭ್ಯರ್ಥಿಗೆ ಸಂಧರ್ಶನಕ್ಕೆ ಮಾಹಿತಿ ಬಂದಿಲ್ಲವೆಂದರೆ, ಸಂದರ್ಶನಕ್ಕೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು.

ಹೆಚ್ಚಿನ ವಿವರಗಳಿಗಾಗಿ ಬ್ಯಾಂಕಿನ ವೆಬ್ ಸೈಟ್: www.sindgiurbanbank.com

https://sindagiurbanbank.buffersoft.com/

ಅಥವಾ ಈ ಕೆಳಗಿನ ಫೋನ್ ನಂಬರನ್ನು ಸಂಪರ್ಕಿಸುವುದು

9035889855